ಸಾಕ್ಷಿದಾರನನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 19.06.2026.

**ಮುಖ್ಯ ವಿಚಾರಣೆ – ವಾದಿ ಪರಃ ಶ್ರೀ. ಜಿ ಬಿ ವಾಯ್, ವಕೀಲರಿಂದಃ**

ನಾನು 1 ನೇ ವಾದಿಯಾಗಿದ್ದು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆಸಿದ ಎಲ್ಲ ವಿಷಯಗಳು ಸತ್ಯವಾಗಿರುತ್ತವೆ. ಸದರಿ ಪ್ರಮಾಣ ಪತ್ರಕ್ಕೆ ನಾನು ಸಹಿ ಮಾಡಿರುತ್ತೇನೆ.

ದತ್ತು ಸ್ವೀಕಾರ ಪತ್ರ ದೃಢೀಕೃತ ಪತ್ರ ಹಾಜರುಪಡಿಸಿದ್ದು ಅದನ್ನು ನಿಪಿ–01 ಎಂದು, ಆದಾರ ಕಾರ್ಡನ್ನು ಹಾಜರುಪಡಿಸಿದ್ದು ಅದನ್ನು ನಿಪಿ–02 ಎಂದು, ರೇಷನ ಕಾರ್ಡನ್ನು ಹಾಜರುಪಡಿಸಿದ್ದು ಅದನ್ನು ನಿಪಿ–03 ಎಂದು, ಜನನ ಪ್ರಮಾಣಪತ್ರ ನಿಪಿ–04 ಎಂದು, ವರ್ಗಾವಣೆ ಪ್ರಮಾಣಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ–05 ಎಂದು ಗುರುತಿಸಲಾಯಿತು.

**ಪಾಟೀ ಸವಾಲು – ಪ್ರತಿವಾದಿ ಪರಃ ಎ ಜಿ ಪಿ, ವಕೀಲರಿಂದಃ**

ವಾದ ಪತ್ರಕ್ಕೆ ಮಾಹಿತಿ ನಾನೇ ನೀಡಿರುತ್ತೇನೆ. ವಾದಿ 2 ರವರನ್ನು ಸರ್ಕಾರಿ ಶಾಲೆಗೆ ಸೇರಿಸಿರುತ್ತೇನೆ. ಆ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನಾನು 2 ನೇ ವಾದಿಯನ್ನು ದತ್ತಕ್ಕೆ ಪಡೆದಿರುತ್ತೇನೆ. ಈ ದಾವೆಯನ್ನು 2 ನೇ ವಾದಿಯ ಹೆಸರು ಚೇತನ ದತ್ತಕ ತಂದೆ ಶಂಕ್ರಪ್ಪ ನಿಂಬಣ್ಣನವರ ಆಗಬೇಕೆಂದು ಕೋರಿ ಸಲ್ಲಿಸಿರುತ್ತೇನೆ. ಶಾಲೆಯಲ್ಲಿ ನಿಪಿ-05 ರಂತೆ ಚೇತನ ಶಂಕ್ರಪ್ಪ ನಿಂಬಣ್ಣನವರ ಎಂದು ನಮೂದು ಆಗಿರುತ್ತದೆ ಎಂದರೆ ಸರಿ. ಶಾಲೆಯವರು ತಿದ್ದುಪಡಿ ಮಾಡುವ ಅವಶ್ಯಕತೆ ಇಲ್ಲಾ ಎಂದರೆ ಸರಿ. 1 ವರ್ಷದ 4 ತಿಂಗಳ ಹಿಂದೆ ನಾನು 2 ನೇ ವಾದಿಯನ್ನು ದತ್ತಕ ಪಡೆದಿರುತ್ತೇನೆ. ವಾದ ಪತ್ರದಲ್ಲಿ

14.02.2025 ಎಂದು ಇದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ದತ್ತಕ ಪತ್ರದಲ್ಲಿ 19.02.2025 ಎಂದು ಇದೆ ಎಂದರೆ ಸರಿ. ದತ್ತಕ ಪತ್ರದಲ್ಲಿ ಇರುವುದು ಸರಿ. ವಾದಪತ್ರದಲ್ಲಿ ಇರುವುದು ಸರಿ. ದತ್ತನ್ನು ಒಂದು ಸಲ ನೋಂದಾಯಿಸುತ್ತಾರೆ ಎಂದರೆ ಸರಿ. 2 ಸಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ಪ್ರತಿವಾದಿಗಳು ಸರ್ಕಾರಿ ನೌಕರರು ಎಂದರೆ ಸರಿ. ದಾವಾ ಹಾಕುವ ಪೂರ್ವದಲ್ಲಿ ಪ್ರತಿವಾದಿಯರಿಗೆ ನೋಟಿಸ ನೀಡಿರುವುದಿಲ್ಲಾ. ನನಗೆ ನೋಟಿಸ ನೀಡಲು ತೊಂದರೆ ಇರುವುದಿಲ್ಲಾ. ಸರ್ಕಾರಿ ಮುಖ್ಯಕಾರ್ಯದರ್ಶಿರ್ಯನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲಾ ಅಂದರೆ ಸರಿ. ನಾನು ದತ್ತಕ ತೆಗೆದುಕೊಳ್ಳುವ ಸಂಬಂಧ ಪತ್ರಿಕಾ ಪ್ರಕಟಣೆ ಕೊಟ್ಟಿರುವುದಿಲ್ಲಾ. ಪ್ರತಿವಾದಿಯರ ವಿರುದ್ಧ ಪರಿಹಾರ ಕೇಳಿಲ್ಲಾ ಎಂದರೆ ಸರಿಯಲ್ಲಾ. ನಾನು ನ್ಯಾಯಾಲಯದಲ್ಲಿ ಯಾವುದೇ ಪರಿಹಾರ ಪಡೆಯಲು ಅರ್ಹ ಇಲ್ಲಾ ಎಂದರೆ ಸರಿಯಲ್ಲಾ. ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ ಹೆ ಕೆ ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು,

ಬ್ಯಾಡಗಿ.